ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಬರ 19
ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ
ದಿನಾಂಕ : DATE : 8/9/20

### ಕೇಂದ್ರ ಸರ್ಕಾರ ಇಚ್ಛಿಸಿದರೆ ಮಾತ್ರ ರಾಜ್ಯಕ್ಕೆ ವಿಶೇಷ ಆರ್ಥಿಕ ನೆರವು

# ರಾಜ್ಯಕ್ಕೆ ಸಿಗುವ ಪರಿಹಾರ 628.7 ಕೋಟಿ ರೂ.!

ಉದಯವಾಣಿ 8/9/20




**ಬೆಂಗಳೂರು:** ರಾಜ್ಯದಲ್ಲಿ ತಲೆದೋರಿದ ನೆರೆಯಿಂದ ಒಟ್ಟು 8071 ಕೋಟಿ ರೂ. ನಷ್ಟ ಉಂಟಾಗಿರುವುದಾಗಿ ರಾಜ್ಯ ಸರ್ಕಾರ ಕೇಂದ್ರ ಅಧ್ಯಯನ ತಂಡಕ್ಕೆ ಮಾಹಿತಿ ನೀಡಿದ್ದರೂ ರಾಜ್ಯ ವಿಪತ್ತು ಪರಿಹಾರ ನಿಧಿಯ (ಎಸ್‌ಡಿಆರ್‌ಎಫ್) ಮಾರ್ಗಸೂಚಿಯಡಿ ಸಿಗುವ ಪರಿಹಾರ 628.7 ಕೋಟಿ ರೂ. ಮಾತ್ರ!

ಕೃಷಿ ಬೆಳೆ, ತೋಟಗಾರಿಕೆ ಬೆಳೆ, ವಾಣಿಜ್ಯ ಬೆಳೆ ನಷ್ಟ ಜಾನುವಾರು ಪ್ರಾಣ ಹಾನಿ, ಮನೆಗಳಿಗೆ ಹಾನಿ ಸೇರಿ ಇತರೆ ಹಾನಿಯಿಂದ ಒಟ್ಟು 5662. 42 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ರಾಜ್ಯ ಸರ್ಕಾರ ವರದಿ ನೀಡಿದೆ. ಜತೆಗೆ ಹೆದ್ದಾರಿ, ರಸ್ತೆ, ಸೇತುವೆ, ಕೆರೆ, ಕುಡಿಯುವ ನೀರು– ಒಳಚರಂಡಿ ವ್ಯವಸ್ಥೆ ವಿದ್ಯುತ್ ಉಪಕರಣಗಳಿಗೆ ಉಂಟಾದ ಹಾನಿ ಪ್ರಮಾಣ 2408. 67 ಕೋಟಿ ರೂ.ನಷ್ಟಿದೆ. ಆ ಮೂಲಕ ಒಟ್ಟಾರೆ 8071 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ಕೇಂದ್ರ ತಂಡಕ್ಕೆ ವಿವರ ನೀಡಿದೆ.

ಆದರೆ, ಸದ್ಯ ಜಾರಿಯಲ್ಲಿರುವ ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ರಾಜ್ಯ ಸರ್ಕಾರ ಉಲ್ಲೇಖಿಸಿರುವ ನಷ್ಟ ಪ್ರಮಾಣಕ್ಕೆ ಸಿಗುವ ಪರಿಹಾರ 628.7 ಕೋಟಿ ರೂ. ಮಾತ್ರ. ಕೇಂದ್ರ ಸರ್ಕಾರ ಇಚ್ಛಿಸಿದರೆ ವಿಶೇಷ ಆರ್ಥಿಕ ನೆರವು ನೀಡಬಹುದಾಗಿದೆ.

**ಹಿಂದೆಯೇ ವಿಶೇಷ ನೆರವು ಕೋರಲಾಗಿತ್ತು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ನೆರೆ ಕಾಣಿಸಿಕೊಂಡು ಭಾರೀ ಪ್ರಮಾಣದಲ್ಲಿ ಹಾನಿ ಉಂಟಾಗಿದ್ದ ಬೆನ್ನಲ್ಲೇ ಪ್ರಧಾನಿ ಮೋದಿಯವರು ವಿಡಿಯೋ ಸಂವಾದ ನಡೆಸಿ ಸ್ಥಿತಿಗತಿ ಬಗ್ಗೆ ಮಾಹಿತಿ ಪಡೆದುಕೊಂಡಿದ್ದರು. ರಾಜ್ಯದಲ್ಲಿ ನೆರೆ ಸ್ಥಿತಿ ಬಗ್ಗೆ ಮಾಹಿತಿ ನೀಡಿದ್ದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ್ ಅವರು 4000 ಕೋಟಿ ರೂ. ವಿಶೇಷ ಆರ್ಥಿಕ ನೆರವಿಗಾಗಿ ಪ್ರಧಾನಿಯವರಲ್ಲಿ ಮನವಿ ಮಾಡಿದ್ದರು.

**ಬೆಳೆ, ಜಾನುವಾರು, ಕೃಷಿ ಭೂಮಿ, ಮನೆ ಹಾನಿ ವಿವರ:** ಕೃಷಿ ಬೆಳೆ ನಷ್ಟ 3,31,170 ಹೆಕ್ಟೇರ್– ನಷ್ಟ 4731.7 ಕೋಟಿ ರೂ., ತೋಟಗಾರಿಕೆ ಬೆಳೆ ನಷ್ಟ 32,976 ಹೆಕ್ಟೇರ್– 251.75 ಕೋಟಿ ರೂ.. ವಾಣಿಜ್ಯ ಬೆಳೆ (ಪ್ಲಾಂಟೇಶನ್)– 38,620 ಹೆಕ್ಟೇರ್– 526.99 ಕೋಟಿ ರೂ., ಹೂಳು ಸಮಸ್ಯೆ/ಕೃಷಿ ಬೆಳೆ ಹಾನಿ: 1262 ಹೆಕ್ಟೇರ್– 11.36 ಕೋಟಿ ರೂ., ಜಾನುವಾರು ಸಾವು: 276 (ಸಂಖ್ಯೆ)– 95 ಲಕ್ಷ ರೂ. (ನಷ್ಟ), ಮನೆ ಹಾನಿ: 10978– 139.67 ಕೋಟಿ ರೂ., ಒಟ್ಟು: 5662. 42 ಕೋಟಿ ರೂ.

**ಮೂಲ ಸೌಕರ್ಯ ಹಾನಿ– ನಷ್ಟ ವಿವರ:** ರಾಜ್ಯ ಹೆದ್ದಾರಿ ಮತ್ತು ಪ್ರಮುಖ ಜಿಲ್ಲಾ ರಸ್ತೆಗಳು: 2509 ಕಿ.ಮೀ.– 1168.27 ಕೋಟಿ ರೂ., ಗ್ರಾಮೀಣ ರಸ್ತೆ (ಹಳ್ಳಿ ರಸ್ತೆ): 10,775 ಕಿ.ಮೀ.– 552.33 ಕೋಟಿ ರೂ., ನಗರ/ ಪಟ್ಟಣ ರಸ್ತೆ: 898 ಕಿ.ಮೀ.– 76.87 ಕೋಟಿ ರೂ., (ಒಟ್ಟು ರಸ್ತೆ ಹಾನಿ: 14,182 ಕಿ.ಮೀ.– 1798.14 ಕೋಟಿ ರೂ.), ಸೇತುವೆ ಹಾನಿ: 1268 (ಸಂಖ್ಯೆ) – 319.25 ಕೋಟಿ ರೂ., ಸಣ್ಣ ನೀರಾವರಿ ಇಲಾಖೆ: 491 ಯೋಜನೆಗಳು– 141.73 ಕೋಟಿ ರೂ.

ವಿದ್ಯುತ್ ಉಪಕರಣಗಳ ಹಾನಿ: ಸುಮಾರು 33.12 ಕೋಟಿ ರೂ., ಕೆರೆಗಳು (ಸಣ್ಣ ನೀರಾವರಿ– ಜಿಲ್ಲಾ ಪಂಚಾಯ್ತಿ): 360 (ಸಂಖ್ಯೆ)– 23.37 ಕೋಟಿ ರೂ., ಸರ್ಕಾರಿ ಕಟ್ಟಡಗಳಿಗೆ ಹಾನಿ: 3168 (ಸಂಖ್ಯೆ)– 83.18 ಕೋಟಿ ರೂ., ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಗೆ ಹಾನಿ: 97 (ಸಂಖ್ಯೆ)– 2.21 ಕೋಟಿ ರೂ., ಕುಡಿಯುವ ನೀರು ಪೂರೈಕೆ ಯೋಜನೆಗಳು: 178 (ಸಂಖ್ಯೆ)– 7.69 ಕೋಟಿ ರೂ., ಒಟ್ಟು ನಷ್ಟ ಮೊತ್ತ: 2408.67 ಕೋಟಿ ರೂ.

ಕೇಂದ್ರ ಆರ್ಥಿಕ ಇಲಾಖೆ ನಿರ್ದೇಶಕ ಡಾ. ಭರತೇಂದು ಕುಮಾರ್ ಸಿಂಗ್, ಕೃಷಿ ಮತ್ತು ರೈತರ ಸಹಕಾರ ಸಚಿವಾಲಯದ ನಿರ್ದೇಶಕ ಡಾ. ಮನೋಹರನ್, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅಧೀಕ್ಷಕ ಎಂಜಿನಿಯರ್ ಸದಾನಂದಬಾಬು, ಕೇಂದ್ರ ಜಲಶಕ್ತಿ ಸಚಿವಾಲಯದ ಅಧೀಕ್ಷಕ ಎಂಜಿನಿಯರ್ ಗುರುಪ್ರಸಾದ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಧೀನ ಕಾರ್ಯದರ್ಶಿ ವಿ.ಪಿ. ರಾಜ್ ವೇದಿ ಅವರು ಕೇಂದ್ರ ಅಧ್ಯಯನ ತಂಡದಲ್ಲಿದ್ದಾರೆ.